ಸಾಕ್ಷಿದಾರರನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 04.11.2023

**ಪಾಟೀ ಸವಾಲು : ವಾದಿ ಪರ ಶ್ರೀ ಎಸ್. ಆರ್. ಹೆಚ್. ವಕೀಲರಿಂದಃ**

1) ದಾವಾ ಆಸ್ತಿ ಪೂರ್ವಕ್ಕೆ ಟಿಎಂಸಿ ನಂಬರ 171/164 ಮತ್ತು ಪಶ್ಚಿಮಕ್ಕೆ ಬೀರಪ್ಪ ಬಣಕಾರ ಇವರ ಆಸ್ತಿ ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಪೂರ್ವ-ಪಶ್ಚಿಮ ಮತ್ತು ದಕ್ಷಿಣೋತ್ತರ ಎಷ್ಟು ವಿಸ್ತೀರ್ಣ ಇದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಪೂರ್ವಕ್ಕೆ ಮಹದೇವಪ್ಪ ಕಬ್ಬಿಣದ ಇವರ ಆಸ್ತಿ, ದಕ್ಷಿಣಕ್ಕೆ ನನದೆ ಆಸ್ತಿ ಇದೆ. ಅದರ ಆಸ್ತಿ ನಂಬರ 183/173 ಬಿ ಇರುತ್ತದೆ.

2) ದಾವಾ ಆಸ್ತಿ ನಮ್ಮ ತಂದೆಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ. ಸದರಿ ದಾವಾ ಆಸ್ತಿಯು ನಿಂಗವ್ವ ಸೂಗಿರಪ್ಪ ಕನವಳ್ಳಿ ಮತ್ತು ಗುಡ್ಡಪ್ಪ ನಿಂಗಪ್ಪ ಕನವಳ್ಳಿ ಇವರ ಹೆಸರಿಗೆ ಇತ್ತು. ಸದರಿಯವರಿಗೆ ಅವರ ತಂದೆಯಿಂದ ಬಂದಿರುತ್ತದೆ. ಈ ಬಗ್ಗೆ ನನ್ನ ಹತ್ತಿರ ದಾಖಲೆ ಇರುವುದಿಲ್ಲ. ದಾವಾ ಆಸ್ತಿಯನ್ನು ನನ್ನ ಹೆಸರಿಗೆ ನಮ್ಮ ತಂದೆ ಭಕ್ಷಿಸ ಪತ್ರ ಮಾಡಿರುತ್ತಾರೆ. ನಮ್ಮ ಅಜ್ಜನ ಹೆಸರಿಗೆ ದಾವಾ ಆಸ್ತಿ ದಾಖಲು ಇದ್ದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಮ್ಮ ಅಜ್ಜ ಗುಡ್ಡಪ್ಪ ನಿಂಗಪ್ಪ ಕನವಳ್ಳಿ ಮತ್ತು ನಿಂಗವ್ವ ಸೂಗಿರಪ್ಪ ಕನವಳ್ಳಿ ಇವರ ಖರೀದಿ ಪತ್ರ ಹಾಜರುಪಡಿಸಿರುತ್ತೇನೆ. ಸದರಿ ದಾವಾ ಆಸ್ತಿ ನಮ್ಮ ಮುತ್ತಜ್ಜ ನೀಲಪ್ಪ ಖರೀದಿ ಮಾಡಿದ ಆಸ್ತಿ ಇರುತ್ತದೆ. ನೀಲಪ್ಪ ಇವರು ಪೂರ್ವ-ಪಶ್ಚಿಮ 12 ಮೊಳದಂತೆ ಎರಡು ಆಸ್ತಿ ಮತ್ತು ದಕ್ಷಿಣೋತ್ತರ 12 ಮೊಳದಂತೆ ಎರಡು ಆಸ್ತಿ ಖರೀದಿ ಹಿಡಿದಿರುತ್ತಾರೆ. ಸದರಿ ಆಸ್ತಿಗಳ ನಂಬರ ನನಗೆ ಹೇಳಲು ಬರುವುದಿಲ್ಲ. ನಮ್ಮ ಅಜ್ಜ ನೀಲಪ್ಪನ ಹೆಸರಿಗೆ ಎರಡು ಖರೀದಿ ಪತ್ರ ಇರುತ್ತವೆ. ಸದರಿ ಎರಡು ಖರೀದಿ ಪತ್ರ ವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಖರೀದಿ ಪತ್ರ ಗಳು 1965 ರಲ್ಲಿ ಆಗಿರುತ್ತವೆ. ನಮ್ಮ ಅಜ್ಜ ನೀಲಪ್ಪ ಎರಡು ಆಸ್ತಿಗಳನ್ನು ಎರಡು ಖರೀದಿ ಪತ್ರದ ಮುಖಾಂತರ ಖರೀದಿ ಹಿಡಿದಿರುತ್ತಾನೆ ಅಂತಾ ಸುಳ್ಳು ಸಾಕ್ಷ್ಯ ಹೇಳುತ್ತೀದ್ದೇನೆ ಎಂದರೆ ಸರಿಯಲ್ಲ. ನಾನು 1965 ನೇ ವರ್ಷದ ಯಾವುದೇ ಖರೀದಿ ಪತ್ರ ವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನೀಲಪ್ಪ ಖರೀದಿ ಹಿಡಿದ ಆಸ್ತಿಗಳು ಮಾಸಣಗಿ ಪಂಚಾಯತಿಯಲ್ಲಿ ನಮೂದು ಆಗಿರುತ್ತದೆ. ಸದರಿ ಆಸ್ತಿಗಳು ನೀಲಪ್ಪ ಕನವಳ್ಳಿ ಇವರ ಹೆಸರಿಗೆ ನಮೂದು ಆಗಿರುತ್ತವೆ. ಸದರಿ ಆಸ್ತಿಗೆ ಯಾವ ನಂಬರ ನೀಡಿರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ.

3) ದಾವಾ ಆಸ್ತಿಗೆ ಮೊದಲು ಪಂಚಾಯತಿಯಲ್ಲಿ ಯಾವ ನಂಬರಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ಮಾಸಣಗಿ ಮೊದಲು ಮಂಡಲ ಪಂಚಾಯತಿ ಇತ್ತು ಎಂದರೆ ಸರಿ. ಮಾಸಣಗಿ ಮಂಡಲ ಪಂಚಾಯತಿಯಲ್ಲಿ ದಾವಾ ಆಸ್ತಿಗೆ 133 ಅಂತಾ ನಂಬರ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ನಂತರ ದಾವಾ ಆಸ್ತಿ ಶಿಡೇನೂರು ಗ್ರಾಮ ಪಂಚಾಯತಿಗೆ ಒಳಪಟ್ಟುರುತ್ತದೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ನಂತರ ಶಿಡೇನೂರು ಗ್ರಾಮ ಪಂಚಾಯತಿಯಲ್ಲಿ ಆಸ್ತಿ ನಂಬರ 165 ಅಂತಾ ದಾಖಲು ಆಗಿರುತ್ತದೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ.

4) ದಾವಾ ಆಸ್ತಿ 1996-97 ನೇ ಸಾಲಿನಲ್ಲಿ ಬ್ಯಾಡಗಿ ಪುರಸಭೆ ವ್ಯಾಪ್ತಿಗೆ ಬಂದಿರುತ್ತದೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ಆ ಸಮಯದಲ್ಲಿ ದಾವಾ ಆಸ್ತಿ ಗುಡ್ಡಪ್ಪ ಮಲ್ಲಪ್ಪ ಕನವಳ್ಳಿ ಇವರ ಹೆಸರಿಗೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಶಿಡೇನೂರು ಗ್ರಾಮ ಪಂಚಾಯತಿಯಲ್ಲಿ ದಾವಾ ಆಸ್ತಿ ಗುಡ್ಡಪ್ಪ ಮಲ್ಲಪ್ಪ ಕನವಳ್ಳಿ ಇವರ ಹೆಸರಿಗೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಬ್ಯಾಡಗಿ ಪುರಸಭೆಯಲ್ಲಿ ದಾವಾ ಆಸ್ತಿ ಗುಡ್ಡಪ್ಪ ಮಲ್ಲಪ್ಪ ಕನವಳ್ಳಿ ಇವರ ಹೆಸರಿಗೆ ಆಗಿತ್ತು ಎಂದರೆ ಸರಿಯಲ್ಲ. ನಂತರ ಗುಡ್ಡಪ್ಪ ಮಲ್ಲಪ್ಪ ಕನವಳ್ಳಿ ಇವರ ಹೆಸರು ಕಡಿಮೆ ಮಾಡಿ ಪರಮೇಶಪ್ಪ ಇತನ ಹೆಸರು ನಮೂದು ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೊದಲು ಗುಡ್ಡಪ್ಪ ಪರಮೇಶಪ್ಪ ಕನವಳ್ಳಿ ಅಂತಾ ಇತ್ತು ಎಂದು ನುಡಿಯುತ್ತಾರೆ.

5) ನಮ್ಮ ತಂದೆಯ ಹೆಸರು ಪುರಸಭೆ, ಬ್ಯಾಡಗಿಯಲ್ಲಿ ದಾವಾ ಆಸ್ತಿಗೆ ಯಾವ ವರ್ಷ ನಮೂದು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಆದರೆ ನನ್ನ ಹೆಸರು 2014 ರಲ್ಲಿ ನಮೂದು ಆಗಿರುತ್ತದೆ. ನನ್ನ ಹೆಸರು 2014 ರಲ್ಲಿ ಭಕ್ಷಿಸ ಪತ್ರದ ಮೂಲಕ ಪುರಸಭೆಯಲ್ಲಿ ನಮೂದು ಆಗಿರುತ್ತದೆ. ನಮ್ಮ ತಂದೆಯ ಹೆಸರಿಗೆ ಪುರಸಭೆ, ಬ್ಯಾಡಗಿಯಲ್ಲಿ ದಾಖಲಾದ ಬಗ್ಗೆ ದಾಖಲೆಗಳನ್ನು ನೋಡಿರುತ್ತೇನೆ. ನಮ್ಮ ಅಜ್ಜಂದಿರಾದ ತಿರುಕಪ್ಪ ಕನವಳ್ಳಿ ಮತ್ತು ಪರಮೇಶಪ್ಪ ಕನವಳ್ಳಿ ಇವರು ವಾರಸಾ ನಾತೆಯಿಂದ ಹಂಚಿಕೆಯಾದ ಬಗ್ಗೆ ದಾಖಲೆಗಳನ್ನು ನೋಡಿರುತ್ತೇನೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ವಕೀಲರು ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಪುರಸಭೆಯಲ್ಲಿ ವಾರಸಾ ನಾತೆಯಿಂದ ಹಂಚಿಕೆಯಾದ ದಾಖಲೆಯನ್ನು ನಮ್ಮ ವಕೀಲರು ಕೇಳಿದರೆ ಹಾಜರುಪಡಿಸುತ್ತೇನೆ. ನಮ್ಮ ಮುತ್ತಜ್ಜನ ಹೆಸರು ಮಾಸಣಗಿ ಪಂಚಾಯತಿಯಲ್ಲಿ ದಾಖಲು ಇತ್ತು. ನಂತರ ಪುರಸಭೆಯಲ್ಲಿ ನಮ್ಮ ಅಜ್ಜನ ಹೆಸರು ದಾಖಲು ಆಗಿರುತ್ತದೆ. ನಮ್ಮ ಮುತ್ತಜ್ಜನ ಹೆಸರು ಶಿಡೇನೂರು ಪಂಚಾಯತಿಯಲ್ಲಿ ದಾಖಲು ಆದ ಬಗ್ಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಮ್ಮ ಅಜ್ಜನ ಹೆಸರು ಮತ್ತು ಮುತ್ತಜ್ಜನ ಹೆಸರು ಪಂಚಾಯತಿಯಲ್ಲಿ ನಮೂದು ಆದ ಬಗ್ಗೆ ನನ್ನ ಹತ್ತಿರ ದಾಖಲೆ ಇವೆ.

6) ಗುಡ್ಡಪ್ಪ ಮಲ್ಲಪ್ಪ ಕನವಳ್ಳಿ ಇವರು ಮುತ್ತಜ್ಜ ನಿಂಗಪ್ಪನ ಅಣ್ಣ-ತಮ್ಮಂದಿರ ಸಂಬಂಧಿಕನಾಗಬೇಕು. ಗುಡ್ಡಪ್ಪ ಮಲ್ಲಪ್ಪ ಕನವಳ್ಳಿ ಇವನು 1 ನೇ ವಾದಿಯ ಗಂಡ ಹಾಗೂ 2 ರಿಂದ 8 ನೇ ವಾದಿಯರ ತಂದೆ ಆಗಬೇಕು ಎಂದರೆ ಸರಿ. ದಾವಾ ಆಸ್ತಿಯಲ್ಲಿ ಗುಡ್ಡಪ್ಪ ಮಲ್ಲಪ್ಪ ಕನವಳ್ಳಿ ಇವರ ಹೆಸರು ಯಾವ ನಾತೆಯಿಂದ ದಾಖಲು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಗುಡ್ಡಪ್ಪ ಮಲ್ಲಪ್ಪ ಕನವಳ್ಳಿ ಇವರ ಹೆಸರನ್ನು ಕಡಿಮೆ ಮಾಡಿ ಪರಮೇಶಪ್ಪ ಮಲ್ಲಪ್ಪ ಕನವಳ್ಳಿ ಇವರ ಹೆಸರು ಹೇಗೆ ದಾಖಲು ಆಗಿದೆ ಎಂಬ ಪ್ರಶ್ನೆಗೆ ಸಾಕ್ಷಿಯು ನಾವು ದಾಖಲೆ ಕೊಟ್ಟ ಮೇಲೆ ಮಲ್ಲಪ್ಪ ಹೆಸರನ್ನು ಕಡಿಮೆ ಮಾಡಿ ಪರಮೇಶಪ್ಪ ಅಂತಾ ದಾಖಲು ಮಾಡಿರುತ್ತಾರೆ. ನಂತರ ಫೋರ್ಜರಿ ಮಾಡಿ ಮಲ್ಲಪ್ಪ ಎಂದು ದಾಖಲು ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಗುಡ್ಡಪ್ಪ ಮಲ್ಲಪ್ಪ ಕನವಳ್ಳಿ ಇವರ ಹೆಸರನ್ನು ಕಡಿಮೆ ಮಾಡಲು ನಾನು ಖರೀದಿ ಪತ್ರ ಮತ್ತು ವಂಶಾವಳಿಗಳನ್ನು ಪುರಸಭೆಗೆ ನೀಡಿರುತ್ತೇನೆ..

ಸಾಕ್ಷಿಯು ಮುಂದುವರಿದು ಖರೀದಿ ಪತ್ರ ಮತ್ತು ವಂಶಾವಳಿಯನ್ನು ನಮ್ಮ ತಂದೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನಮ್ಮ ತಂದೆ ಯಾವಾಗ ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

7) ನಮ್ಮ ಕೈಫಿಯತ ಸಲ್ಲಿಸಲು ನಾನು ಮತ್ತು ನಮ್ಮ ತಂದೆ ಮಾಹಿತಿ ನೀಡಿರುತ್ತೇವೆ. ಕೈಫಿಯತ ಸಲ್ಲಿಸುವ ಸಮಯದಲ್ಲಿ ಗುಡ್ಡಪ್ಪ ಮಲ್ಲಪ್ಪ ಕನವಳ್ಳಿ ಇವರ ಹೆಸರು ದಾಖಲೆಗಳಿಂದ ಕಡಿಮೆ ಮಾಡಿ ಪರಮೇಶಪ್ಪ ದಾಖಲು ಆದ ಬಗ್ಗೆ ಕೈಫಿಯತ ಸಲ್ಲಿಸಲು ನಮ್ಮ ತಂದೆ ಮಾಹಿತಿ ನೀಡಿರುತ್ತಾರೆ. 2010-11 ರಲ್ಲಿ 1 ನೇ ವಾದಿಯ ಗಂಡ 2 ರಿಂದ 8 ನೇ ವಾದಿಯ ತಂದೆ ಗುಡ್ಡಪ್ಪ ಮಲ್ಲಪ್ಪ ಕನವಳ್ಳಿ ಇವರ ಹೆಸರು ಪುರಸಭೆಯಲ್ಲಿ ದಾಖಲು ಇದ್ದ ಬಗ್ಗೆ ಇವತ್ತಿನವರೆಗೂ ನನಗೆ ಮಾಹಿತಿ ಇರುವುದಿಲ್ಲ. 2010-11 ರಲ್ಲಿ 1 ನೇ ವಾದಿಯ ಗಂಡ 2 ರಿಂದ 8 ನೇ ವಾದಿಯ ತಂದೆ ಗುಡ್ಡಪ್ಪ ಮಲ್ಲಪ್ಪ ಕನವಳ್ಳಿ ಇವರ ಹೆಸರು ಪುರಸಭೆಯಲ್ಲಿ ನಾನು ದಾಖಲೆಗಳನ್ನು ಹಾಜರುಪಡಿಸುವಾಗ ಆತನ ಹೆಸರು ದಾಖಲು ಇತ್ತು. ನಾನು ಪುರಸಭೆಯಲ್ಲಿ ದಾವಾ ಆಸ್ತಿ ಯಾರಿಂದ ಯಾರಿಗೆ ದಾಖಲು ಆಗಿದೆ ಅಂತಾ ನಾನು ದಾಖಲೆಗಳನ್ನು ನೋಡಿರುವುದಿಲ್ಲ. ಆದರೆ ನಮ್ಮಲ್ಲಿರುವ ಎಂಟ್ರಿಗಳನ್ನು ನಾನು ನೋಡಿರುತ್ತೇನೆ. ನಮ್ಮಲ್ಲಿ ಎಂಟ್ರಿಗಳು ಎಂದರೆ ಖರೀದಿ ಪತ್ರ , ಭಕ್ಷಿಸ ಪತ್ರ, ಕಟ್ಟಡ ಕೆಡವಿದ ಪತ್ರ ಮತ್ತು ಕಟ್ಟಡ ಕಟ್ಟಿದ ಪತ್ರ , ಕಟ್ಟಡ ಪೂರ್ಣವಾದ ಪತ್ರ, ಕರೆಂಟ್ ಬಿಲ್ಲು ನೋಡಿರುತ್ತೇನೆ.

8) ನಮ್ಮ ತಂದೆ ಖರೀದಿ ಪತ್ರ ಕೊಟ್ಟ ಪ್ರಕಾರ ಮತ್ತು ವಂಶ ವೃಕ್ಷ ಮತ್ತು ಮರಣ ಪ್ರಮಾಣ ಪತ್ರದ ಪ್ರಕಾರ ದಾಖಲು ಆಗಿರುತ್ತದೆ.. ಪ್ರಪ್ರಥಮಬಾರಿಗೆ ಗುಡ್ಡಪ್ಪ ಮಲ್ಲಪ್ಪ ಕನವಳ್ಳಿ ಇವರ ಹೆಸರನ್ನು ಕಡಿಮೆ ಮಾಡಿ ಪರಮೇಶಪ್ಪ ಕನವಳ್ಳಿ ಅಂತಾ 2011 ರಲ್ಲಿ ದಾಖಲು ಆಯಿತು ಎಂದರೆ ಸರಿ. ಪರಮೇಶಪ್ಪನ ಹೆಸರು ದಾಖಲು ಆಗಲು ಪುರಸಭೆಯಲ್ಲಿ ಯಾವುದೇ ಠರಾವು ಆಗಿಲ್ಲ ಎಂದರೆ ಸರಿಯಲ್ಲ. ಯಾವ ತಿಂಗಳು, ವರ್ಷ ಠರಾವು ಮಂಜೂರು ಆಗಿದೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ನಾನು ಠರಾವು ನೋಡಿರುವುದಿಲ್ಲ. ಆಗ ಸಣ್ಣವನಿದ್ದೆ. ಆಗ ನನಗೆ ಸುಮಾರು 17 ರಿಂದ 18 ವರ್ಷ ಆಗಿತ್ತು. ನಾನು ಠರಾವು ನಕಲು ನ್ಯಾಯಾಲಯಕ್ಕೆ ಹಾಜರುಮಾಡಿದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನನಗೆ ಠರಾವು ಹೇಗೆ ಆಯಿತು ಎಂಬ ಬಗ್ಗೆ ಗೊತ್ತಿರುವುದಿಲ್ಲ. ನನಗೆ 2010-11 ರಲ್ಲಿ ಠರಾವು ಆದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಅದನ್ನು ನಾನು ನೋಡಿರುವುದಿಲ್ಲ. ನಮ್ಮ ಪಹಣಿಯಲ್ಲಿ ಠರಾವು ಆ ಬಗ್ಗೆ ನಮೂದು ಇರುತ್ತದೆ. ಪುರಸಭೆಯಲ್ಲಿ 2010-11 ರಲ್ಲಿ ದಾವಾ ಆಸ್ತಿಗೆ ಠರಾವು ಆದ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ನಿಪಿ-6 ರಲ್ಲಿ ಕಲಂ ನಂಬರ 33 ರಲ್ಲಿ ಯಾರ ಹೆಸರಿಗೆ ವರ್ಗಾಯಿಸಿದೆ ಎಂಬ ಬಗ್ಗೆ ಮುಖ್ಯಾಧಿಕಾರಿಗಳ ಆದೇಶ ಇರುತ್ತದೆ ಮತ್ತು ಮುಂದುವರಿದು ದಿಃ 02.07.2010 ರ ಆದೇಶದನ್ವಯ ಮತ್ತೊಂದು ಆದೇಶ ಇರುತ್ತದೆ. ನಿಪಿ-6 ರಲ್ಲಿ ಕಲಂ ನಂಬರ 33 ರ ಆದೇಶದ ಪ್ರಕಾರ ಹೆಸರು ಬದಲಾವಣೆ ಮಾತ್ರ ಆಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಾವು ಮತ್ತೆ ದಾಖಲೆಗಳನ್ನು ಕೊಟ್ಟ ಮೇಲೆ ಮತ್ತೆ ಬದಲಾವಣೆ ಆಗಿದೆ ಎಂದು ನುಡಿಯುತ್ತಾರೆ. ಮತ್ತೆ ಖರೀದಿ ಪತ್ರ, ವಂಶಾವಳಿಗಳನ್ನು ಪುರಸಭೆಗೆ ನೀಡಿರುತ್ತೇವೆ.

9) ನಾವು ಖರೀದಿ ಪತ್ರ ಮತ್ತು ವಂಶವೃಕ್ಷ, ಮರಣ ಪ್ರಮಾಣ ಪತ್ರ ಕೊಟ್ಟ ಮೇರೆಗೆ ಗುಡ್ಡಪ್ಪ ಪರಮೇಶಪ್ಪ ಕನವಳ್ಳಿ ಇವರ ಹೆಸರು ದಾಖಲು ಆಗಿರುತ್ತದೆ. 2011 ಕ್ಕಿಂತ ಪೂರ್ವದಲ್ಲಿ ದಾವಾ ಆಸ್ತಿಗೆ ಗುಡ್ಡಪ್ಪ ಮಲ್ಲಪ್ಪ ಕನವಳ್ಳಿ ಇವರ ಹೆಸರು ದಾಖಲು ಇತ್ತು ಎಂದರೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಇವತ್ತಿನವರೆಗೂ ದಾವಾ ಆಸ್ತಿಗೆ ಗುಡ್ಡಪ್ಪ ಮಲ್ಲಪ್ಪ ಕನವಳ್ಳಿ ಇವರ ಹೆಸರು 2010 ರವರೆಗೆ ಹೇಗೆ ನಮೂದು ಆಗಿದೆ ಎಂದು ದಾಖಲೆಗಳನ್ನು ನೋಡಿರುವುದಿಲ್ಲ.

10) ನಮ್ಮ ಮುತ್ತಜ್ಜನ ಖರೀದಿ ಪತ್ರ ನಾನು ನೋಡಿರುತ್ತೇನೆ. ದಾವಾ ಆಸ್ತಿ ಪೂರ್ವ-ಪಶ್ಚಿಮ 30 ಫೂಟ ಉತ್ತರ-ದಕ್ಷಿಣ 45 ಫೂಟ ಇದೆ ಎಂದರೆ ಸರಿಯಲ್ಲ. ನನ್ನ ಪ್ರಕಾರ ದಾವಾ ಆಸ್ತಿ ಪೂರ್ವ-ಪಶ್ಚಿಮ 15 ವರೆ ಫೂಟ ಉತ್ತರ-ದಕ್ಷಿಣ 30 ಫೂಟ ಇರುತ್ತದೆ. ಈ ಬಗ್ಗೆ ಕಟ್ಟಡ ಪರವಾನಿಗೆ ಮತ್ತು ಇಂಜನಿಯರ ನೀಲ ನಕ್ಷೆ ದಾಖಲೆಗಳು ಇವೆ. ದಾವಾ ಆಸ್ತಿ 30 X 45 ಅಂತಾ ದಾಖಲು ಇದೆ ಎಂದರೆ ಸರಿ. ಆದರೆ ಅದು ಸುಳ್ಳು ಇರುತ್ತದೆ. ದಾವಾ ಆಸ್ತಿ ಎಲ್ಲ ದಾಖಲೆಗಳಲ್ಲಿ 30 X 45 ಅಂತಾ ಬರೆಯಲಾಗಿದೆ ಇದೆ ಎಂದರೆ ಸರಿ. ಆದರೆ ಅದು ಸುಳ್ಳು ಇರುತ್ತದೆ. ನನ್ನ ಪ್ರಕಾರ ದಾವಾ ಆಸ್ತಿ ಪೂರ್ವ-ಪಶ್ಚಿಮ 15 ವರೆ ಫೂಟ ಉತ್ತರ-ದಕ್ಷಿಣ 30 ಫೂಟ ಇದ್ದ ಬಗ್ಗೆ ಪಂಚಾಯತಿಯಲ್ಲಿ ದಾಖಲೆ ಇರುವುದಿಲ್ಲ, ಆದರೆ ಖರೀದಿ ಪತ್ರದಲ್ಲಿ ಇರುತ್ತದೆ. ಎಂದು ನುಡಿಯುತ್ತಾರೆ. ಹಿಂದಿನ ಖರೀದಿ ಪತ್ರದಲ್ಲಿ ಉತ್ತರ-ದಕ್ಷಿಣ 12 ಮೊಳ ಪೂರ್ವ-ಪಶ್ಚಿಮ ಎರಡು ಆಸ್ತಿಗಳು ಆರು, ಆರು ಮೊಳದಂತೆ ಬರೆಯಲಾಗಿದೆ.

11) ಪೂರ್ವ- ಪಶ್ಚಿಮ ಆರು, ಆರು ಮೊಳಗಳು ಸೇರಿ 12 ಮೊಳ ಒಟ್ಟಿಗೆ ಇರುತ್ತದೆ. ನಮ್ಮ ಅಜ್ಜ ಹಿಸ್ಸೆ ಮಾಡಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಪರಮೇಶಪ್ಪನಿಗೆ ಉತ್ತರಕ್ಕೆ ಮತ್ತು ತಿರುಕಪ್ಪನಿಗೆ ದಕ್ಷಿಣಕ್ಕೆ ಪಾಲು ಬಂದಿರುತ್ತದೆ. ಪರಮೇಶಪ್ಪನಿಗೆ ಮತ್ತು ತಿರುಕಪ್ಪನಿಗೆ ಎಷ್ಟು ಅಳತೆ ಬಂದಿರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ದಾವಾ ಆಸ್ತಿ ಪರಮೇಶಪ್ಪನ ಹಿಸ್ಸೆಗೆ ಬಂದ ಆಸ್ತಿ ಇರುತ್ತದೆ. ಪರಮೇಶಪ್ಪನಿಗೆ ಮತ್ತು ತಿರುಕಪ್ಪ ಇವರು ಹಿಸ್ಸೆ ಮಾಡಿಕೊಂಡ ಬಗ್ಗೆ ದಾಖಲೆ ನನಗೆ ಗೊತ್ತಿಲ್ಲ. ಪುರಸಭೆಗೆ ದಾವಾ ಆಸ್ತಿ ಸೇರಿದಾಗ ಅಥವಾ ಅದಕ್ಕಿಂತ ಮೊದಲು ಪಂಚಾಯತಿಯಲ್ಲಿ ಇದ್ದಾಗ ಹಿಸ್ಸೆ ಮಾಡಿಕೊಂಡಿರುತ್ತಾರೆ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಾವಾ ಆಸ್ತಿ ಪರಮೇಶಪ್ಪನ ಹಿಸ್ಸೆಗೆ ಬಂದ ಆಸ್ತಿಯಲ್ಲಿ ಎಷ್ಟು ಅಳತೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಪರಮೇಶಪ್ಪನ ಆಸ್ತಿಯಲ್ಲಿ ಎರಡು ಭಾಗಗಳು ಇರುತ್ತವೆ. ಪರಮೇಶಪ್ಪನಿಗೆ ಎರಡು ಭಾಗಗಳು ಯಾಕೆ ಆಗಿವೆ ಎಂದು ನನಗೆ ಗೊತ್ತಿಲ್ಲ. ಅವುಗಳ ಪೂರ್ಣ ಅಳತೆ ನನಗೆ ಗೊತ್ತಿಲ್ಲ. ಪರಮೇಶಪ್ಪನಿಗೆ ಮತ್ತು ತಿರುಕಪ್ಪನಿಗೂ ಬಂದ ಆಸ್ತಿಗೆ ಏನು ನಂಬರ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪರಮೇಶಪ್ಪನ ಆಸ್ತಿಯಲ್ಲಿ ಎರಡು ಪಹಣಿಗಳು ಪುರಸಭೆಯಲ್ಲಿ ಆಗಿರುತ್ತವೆ. ಎರಡು ಪಹಣಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಅದರಲ್ಲಿ ಒಂದು ಪಹಣಿ ಮಾತ್ರ ಹಾಜರುಪಡಿಸಿರುತ್ತೇವೆ. ಅದು 172/165 ಅಂತಾ ಇರುತ್ತದೆ. ಪರಮೇಶಪ್ಪ ಮತ್ತು ತಿರುಕಪ್ಪನಿಗೆ ಭಾಗ ಆದ ಬಗ್ಗೆ ಠರಾವು ನಾನು ನೋಡಿರುವುದಿಲ್ಲ. ದಾವಾ ಆಸ್ತಿ ನಮ್ಮ ತಂದೆಗೆ ಹಿಸ್ಸೆ ಪ್ರಕಾರ ಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪುರಸಭೆಯವರ ಜೊತೆ ಮಿಲಾಪಿಯಾಗಿ

ಗುಡ್ಡಪ್ಪ ಮಲ್ಲಪ್ಪ ಕನವಳ್ಳಿ ಇವರ ಹೆಸರನ್ನು ಸುತ್ತು ಹಾಕಿ ಪರಮೇಶಪ್ಪ ಕನವಳ್ಳಿ ಇವರ ಹೆಸರನ್ನು ದಾಖಲು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಹಿ/-
ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.